ಈ) ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ನಿಯಮಗಳಿಗೆ ಅನುಸಾರವಾಗಿ ಯಂತ್ರೋಪಕರಣಗಳು, ಕಟ್ಟಡಗಳು, ಸಿಬ್ಬಂದಿ ಮೊದಲಾದ ಮತ್ತು ಸೌಲಭ್ಯಗಳನ್ನು ಅನುಷ್ಠಾನಗೊಳಿಸಲು ಸೂಕ್ತ ಕ್ರಮ ಕೈಕೊಳ್ಳಲಾಗಿದೆ.

Regarding Jumnala Bhandara Scheme.

708 SRI M.L. MUTHANNAVAR (Minister for public works Command Area Development and Irrigation be pleased to state.—

(a) even though the works of Jumnala Bandara are completed what are the reasons for not supplying water for irrigation?

(b) when water will be supplied for irrigation?

SRI H. D. DEVE GOWDA (Minister for Public Works and Irrigation).—

(a) Since the canal works are to be completed.

(b) The canal works are in progress and after completion, necessary action will be taken to allow water for irrigation.

ಅಥಣಿ ತಾಲ್ಲೂಕು ತೆಲಸಂಗ ಗ್ರಾಮದ ಸರ್ವೆ ನಂ. ೮೫೪ರಲ್ಲಿನ ಜಮೀನಿಗೆ ಹೋಗುವ ಸಂಪರ್ಕ ರಸ್ತೆಯನ್ನು ನಿರ್ಮಿಸುವ ಬಗ್ಗೆ

೪೪೫. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ) ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಥಣಿ ತಾಲ್ಲೂಕು ತೆಲಸಂಗ ಗ್ರಾಮದ ಸರ್ವೆ ನಂ. ೮೫೪ರಲ್ಲಿನ ಜಮೀನಿಗೆ ಹೋಗುವ ಸಂಪರ್ಕ ರಸ್ತೆಯನ್ನು ನಿರ್ಮಿಸುವಲ್ಲಿ ಸರಕಾರದವರಿಗೆ ಆಗುತ್ತಿರುವ ತೊಂದರೆ ಏನು;

ಆ) ಜಿಲ್ಲಾಧಿಕಾರಿಗಳು ಸದರಿ ರಸ್ತೆಯ ನಿರ್ಮಾಣಕ್ಕಾಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಆದೇಶ ನೀಡಿದ್ದಾಗ್ಯೂ ಜಮೀನು ಸ್ವಾಧೀನ ಮಾಡಿಕೊಳ್ಳದಿರುವುದಕ್ಕೆ ಕಾರಣಗಳೇನು;

ಇ) ಈ ರಸ್ತೆ ನಿರ್ಮಾಣಕ್ಕೆ ಸರಕಾರದವರಿಗೆ ತಗಲುವ ಹೆಚ್ಚುವೆಚ್ಚ ;

ಈ) ಮೇಲ್ಕಂಡ ಸರ್ವೆ ನಂ. ೮೫೪ರಲ್ಲಿನ ಜಮೀನು ಪರಿಶಿಷ್ಟ ಜನಾಂಗಕ್ಕೆ ಸೇರಿದ್ದು, ಹರಿಜನ ಕೇರಿಯ ಸಂಪರ್ಕ ರಸ್ತೆ ಅಡಿಯಲ್ಲಿ ಸದರಿ ರಸ್ತೆಯನ್ನು ನಿರ್ಮಿಸಲು ಸರಕಾರದವರು ಕೂಡಲೇ ಕ್ರಮ ಕೈಗೊಳ್ಳುವರೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಆಚ್ಚುಕಟ್ಟು ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು).—

ಅ) ಅಥಣಿ ತಾಲೂಕಿನ ತೇಲಸಂಗ ಗ್ರಾಮದ ರಿ. ಸ. ನಂ. ೮೫೪ಳಕ್ಕೆ ಹೋಗಲು ರೈತರು ಪರಸ್ಪರರ ಅನುಮತಿಯಿಂದ ಮಾಡಿಕೊಂಡ ಪಹಿವಾಟಾ ದಾರಿ ಇತ್ತು, ಈ ಪಹಿವಾಟ ದಾರಿಯು ರಿ.ಸ.ನಂ. ೯೪೨, ೯೪೩, ೯೪೪, ೮೫೧, ೮೫೨ ಮತ್ತು ೮೫೪ ಮುಖ್ಯಾಂತರ ಹಾಯ್ದು ಹೋಗುವುದು ಮತ್ತು ಈಗ ಈ ಪಹಿವಾಟಾ ದಾರಿಯನ್ನು ಹಿಡುವಳಿದಾರರು ಸಾಗುವಳಿ ಮಾಡಿರುತ್ತಾರೆ. ಈಗ ಪಹಿವಾಟಾ ದಾರಿಯು ಇರುವುದಿಲ್ಲ. ರೆವಿನ್ಯೂ ಗ್ರಾಮ ನಕಾಶೆಯಲ್ಲಿ ಪಹಿವಾಟಾ ದಾರಿಯು ಇಲ್ಲದ ಕಾರಣ, ಸ. ನಂ. ೮೫೪ರ ಜಮೀನಿಗೆ ರಸ್ತೆ ಮಾಡಲು ಅಕ್ಕಪಕ್ಕದ ಜಮೀನಿನ ಮಾಲಿಕರು ವಿರೋಧಿಸಿರುವರು.